ಅಭಿವೃದ್ಧಿ ಬ್ಯಾಂಕಿನಿಂದ ಸಾಲ ತೆಗೆದುಕೊಂಡಿದ್ದರೆ, ಆ ಕಂತುಗಳನ್ನು ಕಟ್ಟುವುದಕ್ಕೆ, ಹಾಗೂ ಆ ಕಂತುಗಳನ್ನು ವಸೂಲು ಮಾಡುವಂತಹ ಹಕ್ಕು ಭೂ ಅಭಿವೃದ್ಧಿ ಬ್ಯಾಂಕಿಗೆ ಇರುತ್ತದೆ. ಆ ಕಂತುಗಳನ್ನು ವಸೂಲು ಮಾಡತಕ್ಕ ಕ್ರಮವನ್ನು ಅಧಿಕಾರಿಗಳು ಕೈಕೊಂಡಿದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರೂ ಕೂಡ ಸಿದ್ದಾಪುರ ತಾಲ್ಲೂಕಿನಲ್ಲಿ ಇದೇ ರೀತಿ ವಸೂಲಿ ಮಾಡುತ್ತಿದ್ದಾರೆಂಬುದನ್ನು ಸಭೆಯ ಗಮನಕ್ಕೆ ತಂದಿದ್ದಾರೆ. ಆದ್ದರಿಂದ ನಾನು ಈ ಸದನದ ಮೂಲಕ ಸ್ಪಷ್ಟವಾಗಿ ಹೇಳಬಯಸುವುದೇನೆಂದರೆ, ನಾವು ಈ ಒಂದು ಆಜ್ಞೆಯನ್ನು ಹೊರಡಿಸಿದ ಮೇಲೆ ರೈತರು ಕೊಡತಕ್ಕಂತಹ ಕಂತನ್ನು ಕೊಡಕೂಡದು. ಅದನ್ನು ವಸೂಲು ಮಾಡಿದ್ದೇವೆ. ಆದರೆ ಹಿಂದೆ ತೆಗೆದುಕೊಂಡಿದ್ದಂತಹ ಸಾಲದ ಬಗ್ಗೆ ಸರ್ಕಾರ ಆಜ್ಞೆ ಮಾಡಿಲ್ಲ. ಆದರೆ ಮಾನ್ಯ ಸದಸ್ಯರು ಹೇಳುವ ರೀತಿಯಲ್ಲಾಗಿದ್ದರೆ, ಅದಕ್ಕೆ ಅವಕಾಶ ಇಲ್ಲದ ಹಾಗೆ ನಡೆದುಕೊಳ್ಳಬೇಕೆಂದು ಅಧಿಕಾರಿಗಳಿಗೆ ಪುನಃ ಆದೇಶವನ್ನು ಕೊಡುತ್ತೇನೆ.

(4) ಅರ್ಬನ್ ಸೀಲಿಂಗನ್ನು ಗ್ರಾಮಾಂತರ ಪ್ರದೇಶಗಳಿಗೂ ವಿಸ್ತರಿಸುವ ಬಗ್ಗೆ.

ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೆ,

"ಕಾರ್ಪೊರೇಷನ ಇರುವಲ್ಲಿ ನಗರ ಪ್ರದೇಶಗಳಲ್ಲಿ ಅರ್ಬನ್ ಸೀಲಿಂಗ್ ಹಾಕುವುದು ಸರಿ ಆದರೆ ಗ್ರಾಮಾಂತರ ಪ್ರದೇಶಗಳಲ್ಲಿ ಅರ್ಬನ್ ಸೀಲಿಂಗ್ ಹಾಕುವುದರಿಂದ ಆಲ್ಲಿಯ ಕೃಷಿಕರಿಗೆ ತುಂಬಾ ಕಷ್ಟವಾಗುತ್ತದೆ. ಮಂಗಳೂರು ಕಾರ್ಪೊರೇಷನ್ ಒಳಗೆ ಅರ್ಬನ್ ಸೀಲಿಂಗ್ ಸರಿಯಾಗಿರಬಹುದು. ಆದರೆ ಕಾರ್ಪೊರೇಷನ್‌ಗೆ ಒಳಪಡದ ಗ್ರಾಮಾಂತರ ಪ್ರದೇಶಗಳಾದ ಉಳ್ಳಾಲ ಗ್ರಾಮ, ಸೋಮೇಶ್ವರ ಗ್ರಾಮ ಬಜಾಲ್ ಗ್ರಾಮಗಳಿಗೆ ಅರ್ಬನ್ ಸೀಲಿಂಗ್ ಹಾಕಿರುವುದು ಸರಿಯಲ್ಲ. ಈ ಪ್ರದೇಶಗಳಲ್ಲಿ ಕೃಷಿ ಭೂಮಿಗಳಾದ ಗದ್ದೆಗಳೇ ಇರುತ್ತವೆ. ಭೂ ಮಂಸೂದೆಯಲ್ಲಿ ಸಿಕ್ಕಿದ ಕೃಷಿ ಮಾಡುವ ಇಂತಹ ಗದ್ದೆ ಪ್ರದೇಶಗಳಿಗೆ ಅರ್ಬನ್ ಸೀಲಿಂಗ್ ನಿಂದ ತುಂಬಾ ಕಷ್ಟ ಒದಗಿರುತ್ತದೆ. ಇಲ್ಲಿಯ ಕೃಷಿಕರಿಗೆ ಹೆಣ್ಣು ಮಕ್ಕಳಿಗೆ ಮದುವೆ ಮಾಡುವ ಕಾಲಕ್ಕೆ ಮಕ್ಕಳಿಗೆ ವಿದ್ಯಾಭ್ಯಾಸ ಕೊಡುವ ಕಾಲಕ್ಕೆ ಆಪತ್ತು ಒದಗಿದಾಗ ಸ್ವಲ್ಪ ಭೂಮಿಯನ್ನೂ ಕೂಡ ಮಾರಲಿಕ್ಕೆ ಅಧಿಕಾರವಿಲ್ಲ. ಆದ ಕಾರಣ ಕೃಷಿ ಭೂವಿಹಿಯು ಇರುವಂತಹ ಗ್ರಾಮಂತರ ಪ್ರದೇಶಗಳಾದ ಉಲ್ಲಾಳ, ಸೋಮೇಶ್ವರ ಹಾಗೂ ಬಜಾಲ್ ಗ್ರಾಮಗಳಿಗೆ ಹಾಕಿರುವ ಅರ್ಬನ್ ಸೀಲಿಂಗ್ ಅನ್ನು ರದ್ದು ಮಾಡಬೇಕು. ಕಾನೂನನ್ನು ತಿದ್ದುಪಡಿ ಮಾಡಿ ಬದಲಾವಣೆ ಮಾಡಬೇಕು. ಆ ಕುರಿತು ನಗರಾಭಿವೃದ್ಧಿ ಸಚಿವರ ಗಮನವನ್ನು ಸೆಳೆಯುತ್ತಿದ್ದೇನೆ".

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೆ. ಮಾನ್ಯ ಸದಸ್ಯರಾದ ಶ್ರೀಮಾನ್ ಇದಿನಬ್ಬ ರವರು ಎತ್ತಿದಂತಹ ಪ್ರಶ್ನೆ ಬಹಳ ಮಹತ್ವದ್ದು. ಇದು ಕೇಂದ್ರ ಸರ್ಕಾರದ ಕಾನೂನಿನ ವ್ಯಾಪ್ತಿಗೆ ಈ ಒಂದು ಆಜ್ಞೆ ಬಂದಿದೆ. ತಮಗೆ ಏನು ತೊಂದರೆ ಇದೆಯೋ ಅದೇ ತೊಂದರೆ ನನ್ನ ಕ್ಷೇತ್ರದಲ್ಲೂ ಇದೆ. ಹುಬ್ಬಳ್ಳಿ-ಧಾರವಾಡ ಕಾರ್ಪೊರೇಷನ್‌ಗೆ ೧೨ ಮೈಲಿ ಅಂತರ ಇದೆ. ಅಲ್ಲಿರತಕ್ಕ ಹಳ್ಳಿಗಳಲ್ಲೂ ಕೂಡ ಈ ಒಂದು ಕಾನೂನು ಜಾರಿಯಲ್ಲಿದೆ. ಇದರಿಂದ ತೊಂದರೆಯಾಗುತ್ತಿದೆ ಎಂದು ಕೇಂದ್ರ ಸರ್ಕಾರಕ್ಕೆ ಈಗಾಗಲೇ ತಿದ್ದುಪಡಿ ಮಾಡುವಂತೆ ಸಮಾಲೋಚನೆ ಮಾಡುತ್ತಿದ್ದೇನೆ. ನಾನು ಹಿಂದೆ ಕೂಡ ವಿರೋಧಪಕ್ಷದ ನಾಯಕನಾಗಿದ್ದಾಗ ಎತ್ತಿದಂತಹ ಪ್ರಶ್ನೆ ಇದುವರೆಗೂ ಇತ್ಯರ್ಥವಾಗದೆ ಉಳಿದಿದೆ. ಆದರ ಬಗ್ಗೆ ಮಾನ್ಯ ನಗರಾಭಿವೃದ್ಧಿ ಸಚಿವರ ಜೊತೆ ಸಮಾಲೋಚನೆ ಮಾಡಿ, ಕೇಂದ್ರ ಸರ್ಕಾರದ ಜೊತೆಗೆ ಚರ್ಚೆ ಮಾಡಿ, ಇದನ್ನು ಬದಲಾವಣೆ ಮಾಡುವುದಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಬಸವಲಿಂಗಪ್ಪ.—ಇದು ಕೈಗಾರಿಕಾ ಮಂತ್ರಿಗಳಿಗೆ ಸಂಬಂಧಪಟ್ಟದ್ದು. ಅವರು ಸಭೆಯಲ್ಲಿಲ್ಲ. ಆದಕಾರಣ ನಾಳೆ ಈ ಪ್ರಶ್ನೆಯನ್ನು ಸದನದಲ್ಲಿ ಪ್ರಸ್ತಾಪ ಮಾಡುತ್ತೇನೆ.

ಅಧ್ಯಕ್ಷರು.—ಆಗಬಹುದು.